ಬೆಂಗಳೂರಿನ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಂಘ ಲಾಲ್‌ಭಾಗ್, ಬೆಂಗಳೂರು ಸಂಸ್ಥೆಯು ಹಾಲಿ ತನ್ನ ಸ್ವಂತ ಕಟ್ಟಡವಿಲ್ಲದೆ ತೋಟಗಾರಿಕೆ ಇಲಾಖೆಗೆ ಸೇರಿದ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸಲಕರಣೆಗಳನ್ನು ಒದಗಿಸಲು ಸ್ಥಳಾವಕಾಶವಿಲ್ಲದೆ ಇರುವುದೆ ಮುಖ್ಯ ಕಾರಣವಾಗಿದ್ದು ಸಂಘಕ್ಕೆ ಹಣ್ಣು ಮತ್ತು ತರಕಾರಿಗಳನ್ನು ಮಾರಲು ಬರುವ ರೈತರಿಗೆ ಅನಾನುಕೂಲವಾಗದಂತೆ ಸ್ಥಳದಲ್ಲಿ ಖುದ್ದು ಖರೀದಿಸಿ ಅವರನ್ನು ಹಿಂದಕ್ಕೆ ಕಳುಹಿಸಲಾಗುತ್ತಿದೆ. ಸಂಘಕ್ಕೆ ತನ್ನದೇ ಆದ ಸ್ವಂತ ಕಟ್ಟಡ ಹೊಂದಲಂ ಹಣದ ಮತ್ತು ಸ್ಥಳದ ಅಭಾವವು ಮುಖ್ಯ ಕಾರಣವಾಗಿದ್ದು, ಸ್ವಂತ ಸ್ಥಿರ ಸಲಕರಣೆಗಳನ್ನು ಮಾಡಿಕೊಳ್ಳಲು ಸಂಘವು ಪ್ರಯತ್ನ ಮಾಡುವುದು. ಅಲ್ಲದೆ ಇದ್ದ ಸ್ಥಳಾವಕಾಶದಲ್ಲಿಯೇ ಅನುಕೂಲಗಳನ್ನು ಕಲ್ಪಿಸುವ ಸಾಧ್ಯತೆಯಂನ್ನು ಪರಿಶೀಲಿಸಲಾಗುವುದು.

ರೈತರ ಬೆಳೆಗಳಾದ ಟೋಮೆಟೋ ಹುರುಳಿ ಕಾಯಿ ಮಂತ್ತು ಆಲೂಗಡ್ಡೆ ಹಾಗೂ ಇತರೆ ತರಕಾರಿಗಳನ್ನು ಕರ್ನಾಟಕ ರಾಜ್ಯದಿಂದ ಇತರೆ ರಾಜ್ಯಗಳಿಗೆ ರಫ್ತು ಮಾಡುವ ಬಗ್ಗೆ ಹೊರ ರಾಜ್ಯಗಳಿಂದ ಬೇಡಿಕೆ ಸಾಕಷ್ಟು ಮಟ್ಟಿಗೆ ಇರುವುದಿಲ್ಲ, ಈ ಬೆಳೆಗಳು ಸ್ಥಳೀಯವಾಗಿಯೇ ಉಪಯೋಗಿಸಲು ಬೇಡಿಕೆ ಇರುವುದನ್ನು ಗಮನದಲ್ಲಿಟ್ಟುಕೊಂಡು ಹೆಚ್ಚುವರಿ ಉತ್ಪಾದನೆ ಬಂದಾಗ ಇತರೆ ರಾಜ್ಯಗಳಿಗೆ ರಫ್ತು ಮಾಡುವ ಸಲಹೆಯಂನ್ನು ಪರಿಶೀಲಿಸಲಾಗುವುದು. ಈಗ ಹಾಲಿ ಕೇಂದ್ರ ಸರ್ಕಾರದ ಮುಂದಿರುವ ವಿಶ್ವ ಬ್ಯಾಂಕ್ ನೆರವಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಂ ಮಂಜೂರಾದಲ್ಲಿ ಮಾರುಕಟ್ಟೆ ಮತ್ತು ರಫ್ತು ವ್ಯವಸ್ಥೆ ಸುಧಾರಿಸಂವುದು.

ಕೋಲಾರದಲ್ಲಿ ಶೀತಲ ಗೃಹವನ್ನು ಕೆಲವು ಯಾಂತ್ರಿಕ ನ್ಯೂನತೆಗಳ ಕಾರಣದಿಂದಾಗಿ ಪ್ರಾರಂಭಿಸಲಾಗಿಲ್ಲ. ಈ ನ್ಯೂನತೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗಿದ್ದು, ಅದು ಶೀಘ್ರದಲ್ಲಿ ಪೂರ್ಣ ರೀತಿಯಲ್ಲಿ ಕಾರ್ಯಾರಂಭ ಮಾಡುವುದೆಂದು ನಿರೀಕ್ಷಿಸಲಾಗಿದೆ.

ಮತ್ತೆ ಮಾನ್ಯ ಸದಸಂರು ಏನು ಹೇಳಿದ್ದಾರೆ ಅದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಅವರು ಹೇಳಿರುವುದು ಕೊನೇ ಪ್ಯಾರಾಗೆ ಸಂಬಂಧಪಟ್ಟದ್ದು ಶೀಥಲಗಾರ ಕೆಟ್ಟು ಹೋಗಿದೆ ಇದರಿಂದ ತೊಂದರೆಯಾಗುತ್ತದೆಂದು ಮಾನ್ಯ ಬೈರೇಗೌಡರು ಮತ್ತು ವೆಂಕಟರಾಮಯ್ಯನವರು ಏನು ಹೇಳಿದರು ಅದನ್ನು ರಿಪೇ ಮಾಡಬೇಕೆಂದು ನಾನು ಆದಷ್ಟು ಪ್ರಯತ್ನ ಮಾಡಿದ್ದೇನೆ. ಇವತ್ತಿನವರೆಗೂ ಇದರ ಪ್ರಯತ್ನದಲ್ಲಿ ವಿಫಲನಾಗಿದ್ದೇನೆ. ಈ ಶೀಥಾಗಾರಗಳ ಕೆಲಸವನ್ನು ನಮ್ಮ ಕೆ.ಎಂ.ಎಫ್.ರವರು ವಹಿಸಿಕೊಂಟ್ಟು ಇದಕ್ಕೆಂದು ಹತ್ತಾರು ಲಕ್ಷ ರೂಪಾಯಿ ಕೊಟ್ಟಾಗಿದೆ, ಅವರು ಕೆಲಸ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಅವರು ಮಾಡುತ್ತಿಲ್ಲ. ಅದನ್ನು ಸರಿ ಮಾಡಲಿಕ್ಕೆ ನಾನು ಮತ್ತು ಮಾನ್ಯ ಸಿದ್ಧರಾಮಯ್ಯನವರು ಎರಡು ಮೀಟಿಂಗ್ ಮಾಡಿದ್ದೇವೆ. ಅವರು ಸರಿ ಹಾಗಿದೆ ಎಂದು ಹೇಳುತ್ತಾರೆ. ಆದರೆ ಟಮೋಟೋ ಆಲೂಗಡ್ಡೆ ಇಡಲಿಕ್ಕೆ ಆಗುವುದಿಲ್ಲ. ಈ ಬಗ್ಗೆ ವೈಯಕ್ತಿಕವಾಗಿ ತಂತ್ರಜ್ಞಾನ ನನಗೆ ಇಲ್ಲ ಮಾನ್ಯ ವೆಂಕಟರಾಮಯ್ಯನವರು ಮತ್ತು ಮಾನ್ಯ ಬೈರೇಗೌಡರ ಸಹಾಯದಿಂದ ಉತ್ತಮ ತಂತ್ರಜ್ಞಾನ ಉಳ್ಳವರನ್ನು ಕರೆಸಿ ಶೀತಾಗಾರವನ್ನು ಮಾನ್ಯ ಸಿದ್ಧರಾಮಯ್ಯನವರ ಸಹಾಯದಿಂದ ರೈತರಿಗೆ ಸಹಾಯಕ್ಕೆ ಬರುವ ರೀತಿಯಲ್ಲಿ ಸರಿ ಮಾಡುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ಬಿ. ಧರ್ಮಪ್ಪ, ಅವರು ಗೈರು ಹಾಜರಿ.

ಹಿರಿಯೂರು ತಾಲ್ಲೂಕು ಹಳಯಾಳ ಗ್ರಾಮದಲ್ಲಿ ಹಾದು ಹೋಗುವ ಜಿಲ್ಲಾ ಪರಿಷತ್ತು ರಸ್ತೆಯಲ್ಲಿ ಹಣಸೇಮರಗಳ ವಿವಾದವೆದ್ದಿರುವುದು.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಹಿರಿಯೂರು ತಾಲ್ಲೂಕು ಹಳಯಾಳವದು ಗ್ರಾಮದಲ್ಲಿ ಹಾದು ಹೋಗುವ ಈಗ ಜಿಲ್ಲಾ ಪರಿಷತ್ ರಸ್ತೆಯು ಹಿಂದೆ ಭೂ ಸ್ವಾಧೀನ ಮಾಡಿಕೊಂಡು ಅಳತೆ ಮಾಡಿ ಅಳತೆಕಲ್ಲುಗಳನ್ನು ನೆಟ್ಟು ಪಶಪಡಿಸಿಕೊಂಡಿದ್ದ ಪರಿಣಾಮವಾಗಿ ಸುಮಾರು ೮ ಹಣಸೆ ಮರಗಳು ಗ್ರಾಮಠಾಣಕ್ಕೆ ಸೇರಿ ಅವುಗಳನ್ನು ಪಂಚಾಯತಿಯವರು ತಮ್ಮ ಸಂಪನ್ಮೂಲಕ್ಕೆ ಬಳಸಿಕೊಳ್ಳುತ್ತಿದ್ದರು. ಆದರೆ ಇತ್ತೀಚೆಗೆ ಮಂಡಲ ಪಂಚಾಯತಿ ಅಸ್ತಿತ್ವಕ್ಕೆ ಬಂದ ಮೇಲೆ ಕೂಡಲೆ ಭೂ ಮಾಲೀಕರು ಮರಂ ಅಳತೆ ಮಾಡಲು ಜಿಲ್ಲಾ ಎಡಿಎಲ್‌ಆರ್. ಸೂಪರಿಂಡೆಂಟ್‌ರವರನ್ನು ಕರೆ ತಂದು ರಸ್ತೆಯ ಒದಗಿದ್ದ ಕಲ್ಲನ್ನು ಕಿತ್ತು ಹಾಕಿ ಅಳತೆ ಮಾಡಿಸಿದರ ಫಲವಾಗಿ ಈಗ ಹಣಸೆ ಮರಗಳಂ ಭೂಮಾಲಿಕರಿಗೆ ಸೇರಿದೆ. ಇದರಿಂದ ಉದ್ಭವಿಸಿದ ಸಮಸ್ಯೆಗೆ ಭೂಮಾಲಿಕರು ತಡೆಗಿರುವ ರಾಜಕೀಯ

ಪ್ರಭಾವದಿಂದ ಅವಾಯಕ ಹಳ್ಳಿಗರ ಮೇಲೆ ಇವರ ಭೂಮಿ ಕಾಯಂಲು ನೇಮಿಸಿಕೊಂಡಿದ್ದು ಪರಿಶಿಷ್ಟ ಜಾತಿಯವರಿಂದ ಕಂಪ್ಲೆಂಟ್ ಕೊಡಿಸಿ ಪಿಸಿಆರ್ ಕಾಯಿದೆಯನ್ನು ಉಪಯೋಗಿಸಿದ್ದಾರೆ. ಸಾಲದಿದ್ದಕ್ಕೆ ಇದೇ ಪೋಲೀಸ್ ಬಲವೇ ತಮಗಿರುವ ಬೆಂಬಲವೆಂದು ಸಹ ತೋರಿಸುವ ಪ್ರದರ್ಶನ ಮಾಡಿದ್ದಾರೆ. ಇದರಿಂದಾಗ ಜನ ಭೀತರಾಗಿದ್ದಾರೆ ಜೊತೆಗೆ ಈಗ ಹಾಲಿಯಿರುವ ಹುಣಸೆ ಮರಗಳನ್ನು ಕಡಿಯಲು ಯೋಚಿಸಲಾಗಿರುವುದು ತಿಳಿದಿದೆ. ಪ್ರಯುಕ್ತ ಸಂಬಂಧಿಸಿದ ಶಾಖೆಗಳು ಮರು ಆಳತೆ ಮಾಡಲು ಮತ್ತೆ ಅರಣ್ಯ ಇಲಾಖೆಯು ಈ ಮರಗಳನ್ನು ಕಡಿಯಲು ಅವಕಾಶ ನೀಡದಿರಲು ಹಾಗೂ ಸುಳ್ಳು ಕಂಪ್ಲೇಟ್ ಕೊಡಿಸಿ ಜನರನ್ನು ಫಾಸಿಗೊಳಿಸಲು ಮತ್ತು ಮೊಕದ್ದಮೆ ಎದುರಿಸಲು ಮಾಡಿರುವ ಸಂಚನ್ನು ತನಿಖೆ ಮೂಲಕ ಬಯಲಿಗೆಳೆದು ಇಂತಹ ಸ್ವಾರ್ಥಪರರನ್ನು ಸರಕಾರ ಸರಿಯಾದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ನನ್ನ ವಿನಂತಿ.

ಪ್ರೊ. ಎ. ಲಕ್ಷ್ಮೀಸಾಗರ್.—ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ ತರಿಸಿಕೊಡುತ್ತೇನೆ.

6. ಹುಕ್ಕೇರಿ ತಾಲ್ಲೂಕು ಯಾದಗೂರು ಗ್ರಾಮದಲ್ಲಿ ಎಸ್.ಡಿ.ವಿ.ಎಸ್. ಸಂಘದ ಜೂನಿಯರ್ ಕಾಲೇಜಿಗೆ ಧನ ಸಹಾಯ ನೀಡುವುದು.

ಶ್ರೀ ಎಂ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನ ಯಾದಗೂಡು ಗ್ರಾಮದಲ್ಲಿ ಶ್ರೀ ಎಸ್**ಡಿ.ವಿ.ಎಸ್.** ಸಂಘದ ಆಡಳಿತದಲ್ಲಿರುವ ಜೂನಿಯರ್ ಕಾಂಪೋಸಿಟ್ ಕಾಲೇಜು ಮಂಜೂರಾಗಿ ಸತತವಾಗಿ ೫ ವರ್ಷದವರೆಗೆ ತನ್ನ ಕಾರ್ಯವನ್ನು ಸುವ್ಯವಸ್ಥಿತವಾಗಿ ನಿರ್ವಹಿಸಿದೆ. ಶಿಕ್ಷಣ ಇಲಾಖೆಯ ನಿಯಮಾವಳಿ ಪ್ರಕಾರ ಎಲ್ಲ ಬೇಡಿಕೆಗಳನ್ನು ಈಡೇರಿಸಿದ್ದು ಸರ್ಕಾರದಿಂದ ಕೊಡ ಬೇಕಾಗಿರುವ ಎಲ್ಲ ರೀತಿಯ ಸಹಾಯ ಇಲ್ಲಿಯವರೆಗೆ ಸಿಗದೇ ಇರುವುದು ಸಂಸ್ಥೆಗೆ ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾಗಿ ಬಂದಿದೆ.

ಜೂನಿಯರ್ ಕಾಂಪೋಸಿಟ್ ಕಾಲೇಜಿನಿಂದ ಹಾಗೂ ಸಂಘದಿಂದ ಶಿಕ್ಷಣ ಇಲಾಖೆಗೆ ಬೇಡಿಕೆಯನ್ನು ಸಲ್ಲಿಸಿದ್ದು ಹಲವಾರು ದಿನಗಳ ನಂತರ ಕೂಡ ಇದಕ್ಕೆ ಸಹಾಯ ಮಾಡುವ ಇಚ್ಛೆ ಇಲಾಖೆಯಲ್ಲಿರುವ ಕೆಲವೊಂದು ಮಹನೀಯರಿಗೆ ಇಲ್ಲವೆಂದು ಕಾಣುತ್ತದೆ. ಸಹಾಯ ಮಾಡುವ ಸಮಯದಲ್ಲಿ ದೇವರಿಗೆ ಸಲ್ಲಿಸಬೇಕಾದ ಕರ್ಪೂರ, ದೀಪ ಹಾಗೂ ನೈವೇದ್ಯ ದಕ್ಷಿಣೆ ಎಲ್ಲವನ್ನೂ ಕೊಡಬೇಕಾಗುವುದೆನ್ನುವ ಚರ್ಚೆ ನಡೆದಿದೆ. ಇಂತಹ ಪ್ರಕರಣಗಳಲ್ಲಿ ಸರ್ಕಾರ ನೇರವಾಗಿ ಮಾಹಿತಿಯನ್ನು ಪಡೆದುಕೊಂಡು ಸಂಸ್ಥೆಗೆ ಆರ್ಥಿಕ ಮುಗ್ಗಟ್ಟಾಗದಂತೆ ಕೂಡಲೇ ಕೊಡಬೇಕಾಗಿರುವ ಧನ ಸಹಾಯವನ್ನು ಕಾನೂನಿನ ಪ್ರಕಾರ ಕೊಡಿಸಬೇಕಾಗಿ ಒತ್ತಾಯಿಸುತ್ತೇನೆ. ಹಾಗೂ ರಾಜ್ಯದಲ್ಲಿರುವ ಇಂತಹ ಸಂಸ್ಥೆಗಳಿಗೆ ಕೂಡಲೇ ಸರ್ಕಾರ ಸಹಾಯ ನೀಡಬೇಕಾಗಿ ಕೇಳಿಕೊಳ್ಳುತ್ತಾ ಶಿಕ್ಷಣ ಸಚಿವರು ಸದನದಲ್ಲಿ ವಿವರವಾದ ಹೇಳಿಕೆ ಕೊಡಬೇಕೆಂದು ಆಗ್ರಹಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಿಂದ ಹೇಳಿಕೆಯನ್ನು ಕೊಡಿಸುತ್ತೇನೆ

7. ರಾಣೆಬೆನ್ನೂರು ತಾಲ್ಲೂಕಿಂ ಮೆಡ್ಲೇರಿ ಮಂಡಲ ಪಂಚಾಯಿತಿಗೆ ಸೇರಿದ ನೀಲಗಿರಿ ಮರಗಳನ್ನು ಕಡಿಯಲಿಂ ಪರವಾನಗಿಯನ್ನು ಕೊಡಲು ಅರಣ್ಯ ಅಧಿಕಾರಿಗಳಿಂ ವಿಳಂಬ ಮಾಡಿರುವುದು

ಶ್ರೀ ಕೆ.ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ರಾಣೆಬೆನ್ನೂರು ತಾಲ್ಲೂಕು ಮೆಡ್ಲೇರಿ ಮಂಡಲ ಪಂಚಾಯಿತಿಯ ಮಾಲೀಕತ್ವಕ್ಕೆ ಸೇರಿದ ಸರ್ವೆ ನಂಬರಿನಲ್ಲಿ ನೀಲಗಿರಿ ಗಿಡಗಳನ್ನು ಬೆಳೆಸಿದ್ದು ಅವು ಈಗ ಕಟಾವು ಮಾಡಲಿಕ್ಕೆ ಬಂದಿದ್ದು ಮಂಡಲ ಪಂಚಾಯಿತಿಯವರು ಅರಣ್ಯ ಇಲಾಖೆಯವರ ಒಪ್ಪಿಗೆ ಕೇಳಿರುತ್ತಾರೆ, ಅರಣ್ಯ ಇಲಾಖೆಯ ಚೀಫ್ ಕನ್ಸರ್‌ವೇಟರ್ ಅವರು ಈಗಾಗಲೇ ಒಪ್ಪಿಗೆ ಕೊಡಲು ಕನ್‌ಸರ್‌ವೇಟರ್ (ಬೆಳಗಾಂ) ಇವರಿಗೆ ಆದೇಶ ಕೊಟ್ಟಿದ್ದು ಎರಡು ತಿಂಗಳಾದರೂ ಕನ್ಸರ್‌ವೇಟರ್‌ರವರು ಒಪ್ಪಿಗೆ ಕೂಡದೇ ಹಾಗೆಯೇ ಮುಂದಿಗಿಕೊಂಡಿದ್ದಾರೆ. ಗಿಡಗಳು ಒಣಗಿ ಹೋಗಿ ಕಳವಾಗುತ್ತಾ ಮಂಡಲ ಪಂಚಾಯತಿಗೆ ತುಂಬಲಾರದ ಅಂದರೆ ಲಕ್ಷಾಂತರ ರೂಪಾಯಿ ಹಣ